ನೋಟಿಫಿಕೇಷನ್.

1ನೇ ಸೆಪ್ಟಂಬರ್ 1890.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಆನೆಯು ಮಾರಲ್ಪಡುತ್ತದೆ. ಆದ್ದರಿಂದ ಈ ಕೆಳಗೆ ರುಜು ಮಾಡಿರುವವರಿಗೆ ಕೂಡ್ಲೇ ಬರದುಕೊಳ್ಳತಕ್ಕದ್ದು. ಈ ಆನೆಯನ್ನ ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಯಲ್ಲಾಗಲಿ ಅಥವಾ ಹೆಗ್ಗಡದೇವನ ಕೋಟೆ ತಾಲ್ಲೂಕು ಹಂಪಾಪುರ ಅಥವಾ ಕಾರಾಪುರದಲ್ಲಾಗಲಿ ನೋಡಬಹುದು.

ಆನೆ ಹೆಸರು.	ಜಾತಿ.	ಯತ್ತರ.		ಹಿಡಿಯಲ್ಪಟ್ಟ ತಾರೀಖು.
		ಅಡಿ.	ಅಂಗಲ	
ಕಲ್ಯಾಣಿ	ಹೆಂಣು	7	4	28—6—86.

ಪರಾ.—ಈ ಆನೆಯು ಚನ್ನಾಗಿ ತಯಾರ್ಮಾಡಲ್ಪಟ್ಟಿದೆ ಮತ್ತು ವೊಳ್ಳೇ ಆರೋಗ್ಯ ಸ್ಥಿತಿಯಲ್ಲಿದೆ. ಈ ಆನೆಯು 1887ನೇ ಇಸವಿ ಲಾಗಾಯತು ಹೊಸ ಆನೆಗಳನ್ನು ತಯಾರ್ಮಾಡಲು ವುಪಯೋಗಿಸಲ್ಪಡುತ್ತಾ ಇದೆ.

ಬಿ. ರಾಮಸ್ವಾಮಿ ಐಯ್ಯರ್,
ಅಸಿಸ್ಟೆಂಟ್ ಕಲೆಕ್ಟರ್ ಆಫ್ ಮೈಸೂರ್.

ಮೈಸೂರು ಗೆಜೆಟ್ ಕಂಪೈಲರ್ ಸಾಹೆಬರವರ ಆಫಿಸಿನಿಂದ.

ಮೈಸೂರು ಕೀಮೆಯ ದರೋಬಸ್ತು ತಾಲ್ಲೂಕು ಅಮಲ್ದಾರರುಗಳಿಗೆ ಆಂಕಿ.

ಮೈಸೂರು ಗೆಜೆಟ್ ಚಂದಾ ವೊಬಲಗು ತಾಲ್ಲೂಕು ಖಜಾನೆಗೆ ಜಮಾ ಆದ ಬಗ್ಯೆ ಹಾಲಿ ಅಚ್ಚಿನ ರೀತಿ ಕೊಡುತ್ತಾ ಯಿರುವದು ಸರಿಯಷ್ಟೆ—ಹಾಗೆ ರೀತಿ ಕೊಡುವದರಲ್ಲಿ ಕೆಲವು ತಾಲ್ಲೂಕು ಅಮಲ್ದಾರರು ಕೈಬರಹದ ರೀತಿ ಕೊಡೋಣವು ಯಿನ್ನೂ ಕೆಲವರು ಫೈನ್ಯಾಷಿಯಲ್ 1ನೇ ಗುರ್ತುಳ್ಳ ರೀತಿ ಕೊಡೋಣವು—ಯಿನ್ನೂ ಕೆಲವರು ರದ್ದುದ ರಿಪೋರ್ಟು ಫಾರಮು ವುಪಯೋಗಿಸೋಣವು ಹೀಗೆ ವಜೊಬ್ಬ ಅಮಲ್ದಾರರು ವಂದೊಂದು ವಿಧವಾದ ಪದ್ಧತಿ ಆಚರಿಸಿ ಅದರಿಂದ ಈ ಆಫಿಸಿನಲ್ಲಿ ತಯಾರಾಗಬೇಕಾದ ಲೆಕ್ಕಗಳಿಗೆ ಕುಂದಕ ಸಂಭವಿಸಿ ಈ ವಿಷಯದಲ್ಲಿ ಯೆಲ್ಲಾ ತಾಲ್ಲೂಕಿನವರೂ ವಂದೇ ಪದ್ಧತಿ ಅನುಸರಿಸಬೇಕೆಂಬ ಅಭಿಪ್ರಾಯದಿಂದ ಕಾಂಪಟ್ರೋಲರವರಿಗೆ ಕಲ್ಕೀಮಾಡಿರಲಾಗಿ ಅವರು ನಮ್ಮ ಯಿರಾದೆಯನ್ನ ಅಂಗೀಕರಿಸಿ ಮಾಹೆ ಗುಜಸ್ತಾ 3ನೇ ಮುಕ್ತಂ 3232ನೇ ನಂಬರ್ ಲೆಟ್ರು ಬರೆಸಿ ಯಿರುತ್ತಾರಾಗಿ ಸೂಚಿಸುವೆದೇನಂದರೆ:—

2. ಗೆಜೆಟ್ ಚಂದಾ ಬಗ್ಯಾಗಿ ಬರುವ ತಮೊಂ ಮೊಬಲಗಿಗೋಸ್ಕರ ಕೊಡಲ್ಪಡಬೇಕಾದ ರೀತೀ ನಮೂನೆಯನ್ನ ಅಚ್ಚು ಹಾಕಿಸಿ ಬುಕ್ಕು ಮಾಡಿಸಿ ನಿಮಿಗೆ ಈ ದಿವಸ ಅಲಾಹಿದಾ ಕಳುಹಿಸಿರುತ್ತೆ—ಅದು ತಲಪಿದ ತಾರೀಖು ಲಾಗಾಯತು ರೀತಿಗಳನ್ನ ಸದರೀ ಫಾರಂನಲ್ಲಿಯೇ ತಯಾರ್ಮಾಡಬೇಕಾಗಿರುತ್ತೆ—"ಮಾರ್ಜಿ" ಭಾಗವು ತಾಲ್ಲೂಕಿನಲ್ಲಿ ದಾಖಲೆ ಬಗ್ಯೆ ಯಿಟ್ಟು ಕೊಳ್ಳತಕ್ಕದ್ದು—"ಒರಿಜನಲ್" ಮತ್ತು "ಡ್ಯೂಪ್ಲಿಕೇಟ್" ಭಾಗಗಳು ಚಂದಾ ದಾರರಿಗೆ ಕೊಡಲ್ಪಡಬೇಕು, ಖಾಲೀ ಬಿಟ್ಟಿರತಕ್ಕ ಜಾಗಾಗಳಲ್ಲಿ ಅವಶ್ಯಕವಾದ ತಪಶೀಲ್ ಪೂರ್ತಿಯಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು, ಮುಖ್ಯವಾಗಿ ಚಂದಾ ವೊಬಲಗು ಖಜಾನೆಗೆ ಜಮೆ ಆದ ತಾರೀಖು—ಚಂದಾದಾರರ ಹೆಸರು ವಿಳಾಸ ಈ ತಪಶೀಲ್ ಸ್ಪಷ್ಟವಾಗಿ ನಮೂದಿಸಬೇಕಾಗಿರುತ್ತೆ.

3. ತತ್ಕಾಲದ ವುಪಯೋಗಕ್ಕಾಗಿ 100 ಫಾರಂ ಅಡಗಿರತಕ್ಕ ಬಂದು ಬುಕ್ಕು ಕಳುಹಿಸಿರುತ್ತೆ, ಯಿದು ಮುಗಿದ ಹಾಗೆಲ್ಲಾ ಪುನಹ ವದಗಿಸಲ್ಪಡುತ್ತೆ.

4. ಈ ಬುಕ್ಕಿನಲ್ಲಿ ನಂಬರ್ 1ರ ಲಾಗಾಯತು ಜಂಜರ್ ನಂಬರ್ ಹಾಕಬೇಕು "ಒರಿಜನಲ್" ಭಾಗವನ್ನ ತಕ್ಷಣ ಈ ಆಫಿಸಿಗೆ ಕಳುಹಿಸುವಂತೆ ಚಂದಾದಾರರಿಗೆ ತಿಳಿಸಬೇಕು.

5. ಸದರೀ ಬುಕ್ಕಿನಲ್ಲಿ ಅಂಟಿಸಿರುವ ತಿಳುವಳಿಕೆ ಪತ್ರಿಕೆಯನ್ನ ಪೂರ್ತಿಯಾಗಿ ನಿಗೆಯಲ್ಲಿಟ್ಟು ಆ ಪ್ರಕಾರ ನಡಿಸಬೇಕಾಗಿ ಕೋರುತ್ತೇವೆ.

ತಾರೀಖು 2ನೇ ಡಿಸಂಬರ್ 1890ನೇ ಇಸವಿ.

ಟಿ. ಟಿ. ಲೆನಾರ್ಡ್,
ಮೈಸೂರ್ ಗೆಜೆಟ್ ಕಂಪೈಲರ್.